## ಜೆ.ಎಸ್.ಎಸ್ ಪಬ್ಲಿಕ್ ಶಾಲೆ, ಬನಶಂಕರಿ 2ನೇ ಹಂತ, ಬೆಂಗಳೂರು–70

### ಪರಮ ಪೂಜ್ಯ ಜಗದ್ಗುರು ಡಾ. ಶ್ರೀ. ಶ್ರೀ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ೧೦೪ನೆಯ ಜಯಂತಿ ಮತ್ತು ಶಿಕ್ಷಕರ ದಿನಾಚರಣೆ ವರದಿ.

ದಿನಾಂಕ : ೦೫–೦೯–೨೦೧೯



ರಾಜಗುರುತಿಲಕ ಪರಮ ಪೂಜ್ಯ ಜಗದ್ಗುರು ಡಾ. ಶ್ರೀ. ಶ್ರೀ. ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ೧೦೪ನೆಯ ಜಯಂತಿ ಮಹೋತ್ಸವವನ್ನು ದಿನಾಂಕ– ೦೫/೦೯/೨೦೧೯ ರಂದು ಶಾಲೆಯ ಆವರಣದಲ್ಲಿರುವ 'ಘನಲಿಂಗ ಶಿವಯೋಗಿ ಸಭಾಭವನ'ದಲ್ಲಿ ಶ್ರದ್ಧಾಭಕ್ತಿಗಳಿಂದ ಆಚರಿಸಲಾಯಿತು. ಶಾಲೆಯ ಸಂಸ್ಕೃತ ಶಿಕ್ಷಕರಾದ ಶ್ರೀ ಕೃಷ್ಣಮೂರ್ತಿ ಅವರು ಪೂಜಾ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಡಾ. ರಾಧಾಕೃಷ್ಣನ್ ಅವರ ಸವಿನೆನಪಿಗಾಗಿ 'ಶಿಕ್ಷಕರ ದಿನಾಚರಣೆ ' ಕಾರ್ಯಕ್ರಮವನ್ನು ಜಂಟಿಯಾಗಿ ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಜೆ.ಎಸ್.ಎಸ್.ಕೇಂದ್ರೀಯ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಗೌರಿ ಬಿ. ನಟರಾಜರವರು ಅಧ್ಯಕ್ಷತೆಯನ್ನು ವಹಿಸಿದ್ದರು.



ಶಾಲೆಯ ಗಾಯನ ತಂಡದವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ ೫ನೆಯ ತರಗತಿಯ ವಿದ್ಯಾರ್ಥಿನಿ ಕುಮಾರಿ ಸ್ವಾತಿ, 'ಶಿವಸ್ತುತಿ' ಗೀತೆಗೆ ನೃತ್ಯ ಮಾಡಿದರು. ವಿದ್ಯಾರ್ಥಿನಿ ರಚನ, ಹತ್ತನೇ ತರಗತಿ ಸ್ವಾಗತ ಕೋರಿದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಗೌರಿ ಬಿ. ನಟರಾಜರವರು ದೀಪ ಬೆಳಗಿಸುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಿಜಯ ರಾಮಚಂದ್ರರವರು ಸ್ವತಂತ್ರ ಪೂರ್ವದಲ್ಲಿಯೇ ತ್ರಿವಿಧ ದಾಸೋಹ ಸೇವೆ ಆರಂಭಿಸಿದ ಶ್ರೀಗಳ ತ್ಯಾಗ, ಮಾತೃತ್ವ ಶಕ್ತಿ, ಪ್ರಾಮಾಣಿಕತೆಗಳ ಬಗ್ಗೆ ತಿಳಿಸಿ 'ನುಡಿನಮನ' ಸಲ್ಲಿಸಿದರು.



ಶಾಲೆಯ ವಿದ್ಯಾರ್ಥಿ ಗಾಯನ ತಂಡದವರಿಂದ ಸುಶ್ರಾವ್ಯವಾಗಿ ವಚನ ಗಾಯನ ನಡೆಯಿತು. ಪ್ರಾಂಶುಪಾಲರಾದ ಶ್ರೀಮತಿ ಗೌರಿ ಬಿ. ನಟರಾಜ ಅವರು ತಮ್ಮ ಸುಮಧುರ ವಚನಗಾಯನದ ಮೂಲಕ 'ಗೀತನಮನ' ಸಲ್ಲಿಸಿದರು.

ಶ್ರೀಗಳವರ ಜಯಂತಿ ಕಾರ್ಯಕ್ರಮದ ಜೊತೆಯಲ್ಲಿ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ವಿವಿಧ ಮನರಂಜನಾ

ಕಾರ್ಯಕ್ರಮಗಳನ್ನು ನೀಡಿದರು. 4ನೇ ತರಗತಿ 'ಬಿ' ವಿಭಾಗದ ವಿದ್ಯಾರ್ಥಿ ಚಿ. ಶಾಮ್ ಶಿಕ್ಷಕ ದಿನಾಚರಣೆಯ ಬಗ್ಗೆ ಅರ್ಥಪೂರ್ಣ ಭಾಷಣ ಮಾಡಿದನು. ಶಿಕ್ಷಕರ ಮಹತ್ವದ ಬಗೆಗೆ ಸವಿವರವಾಗಿ ತಿಳಿಸಿದನು. 4ನೇ ತರಗತಿ 'ಬಿ' ವಿಭಾಗದ ಮಕ್ಕಳು ಈ ಸಂದರ್ಭದಲ್ಲಿ 'ಸ್ವಾಮಿ ವಿವೇಕಾನಂದ'ರ ಬಿತ್ತಿ ಚಿತ್ರವನ್ನು ಕೊಡುಗೆಯಾಗಿ ನೀಡಿದರು.



ಕೇಂದ್ರ ಮಾನವ ಸಂಪನ್ಮೂಲಅಭಿವೃದ್ಧಿ ಇಲಾಖೆಯ ವತಿಯಿಂದ 2018 - 19ನೇ ಸಾಲಿನಲ್ಲಿ ನಡೆದ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ಈ ಸಮಾರಂಭದಲ್ಲಿ ಶಾಲೆಯ ಎಲ್ಲ ಶಿಕ್ಷಕ ಮತ್ತು ಶಿಕ್ಷಕೇತರ ವರ್ಗ, ವಿದ್ಯಾರ್ಥಿವೃಂದ ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ವಿದ್ಯಾರ್ಥಿಗಳಾದ ಜಯರಾಂ ಮತ್ತು ಶಕ್ತಿ, ಹತ್ತನೇ ತರಗತಿ, ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು. ವಿದ್ಯಾರ್ಥಿ ನಿಖಿಲ್, ಹತ್ತನೇ ತರಗತಿ, ಇವರು ವಂದನಾರ್ಪಣೆ ಸಲ್ಲಿಸಿದರು.